# ಸ್ತ್ರೀವಾದಿ ಪಾತ್ರ ಇಷ್ಟ

**ಸಂಗೀತಾ ಭಟ್**
ಉದಯದ 'ದೊಡ್ಮನೆ ಸೊಸೆ'ಯ ನಾಗಮಣಿ

★ *ಯಜಮಾನಿ ಆಗಿ ಹೇಗೆನಿಸುತ್ತದೆ?*

ತುಂಬಾ ಸಮರ್ಥ ವ್ಯಕ್ತಿತ್ವದ ಪಾತ್ರ. ಪರಂಪರೆಯನ್ನು ಕಾಪಾಡುವ ಗಟ್ಟಿಗಿತ್ತಿ ಆಕೆ. ಸಂಪ್ರದಾಯದ ರಕ್ಷಣೆಗಾಗಿ ಎಂತಹ ಕಠೋರ ನಿರ್ಧಾರವನ್ನು ತೆಗೆದುಕೊಳ್ಳಲೂ ಆಕೆ ಸಿದ್ಧ ಎನ್ನುವುದಕ್ಕೆ ಆಕೆಯ ಮಗಳ ಸಾವೇ ನಿದರ್ಶನ. ಹಾಗಿರುವಂತಹ ವ್ಯಕ್ತಿತ್ವದ ಜೊತೆ ಸಂಘರ್ಷಕ್ಕೆ ಇಳಿಯಲು ಸೊಸೆ ಬಂದಿದ್ದಾಳೆ. ಆಕೆಯನ್ನು ಎದುರು ಹಾಕಿಕೊಳ್ಳುವ ನಾಗಮಣಿ ಪಾತ್ರ ಚೆನ್ನಾಗಿದೆ.



★ *ಕಿರುತೆರೆಗೆ ತಡವಾಯಿತು?*

ರಂಗಭೂಮಿಯಲ್ಲಿ ಕ್ರಿಯಾಶೀಲಳಾಗಿದ್ದ ಕಲಾವಿದೆ. ಇಪ್ಪತ್ತು ವರ್ಷಗಳ ಹಿಂದೆ ಒಂದು ಧಾರಾವಾಹಿಯಲ್ಲಿ ನಟಿಸಿದ್ದೆ. ನಂತರ ಮತ್ತೆ ರಂಗಭೂಮಿಯಲ್ಲಿ ತೊಡಗಿಕೊಂಡೆ. ಇದಕ್ಕಿಂತ ಮುಂಚೆ ಕಲರ್ಸ್ ಕನ್ನಡದ 'ಓಂ ಶಕ್ತಿ ಓ ಶಾಂತಿ' ಧಾರಾವಾಹಿಯಲ್ಲಿ ನಟಿಸಿದ್ದೆ. ಇದು ಎರಡನೇ ಧಾರಾವಾಹಿ. ಈ ಅಂತರ ಏಕೆ ಎಂದರೆ ನಾನು ಅವಕಾಶಗಳನ್ನು ಹುಡುಕುವ ಪ್ರಯತ್ನ ಮಾಡಲಿಲ್ಲ. ಅಂತೆಯೇ ಅವಕಾಶವೂ ನನ್ನನ್ನೇ ಹುಡುಕಿಕೊಂಡು ಬರಲಿಲ್ಲ.

★ *ಹಿರಿಯ ಪಾತ್ರಗಳ ನಿರ್ವಹಣೆಯ ಸವಾಲುಗಳು ಯಾವುವು?*

ನನಗಿಂತ ವಯಸ್ಸಿನಲ್ಲಿ ಹಿರಿಯಳ ಪಾತ್ರವನ್ನು ನಿರ್ವಹಿಸುತ್ತಿದ್ದೇನೆ. ಆದರೆ ಆ ಪಾತ್ರ ಇನ್ನೂ ಗಟ್ಟಿಯಾಗಿದೆ. ಆಂಗಿಕ ಅಭಿನಯ ಮತ್ತು ಭಾಷೆಯಲ್ಲಿ ಅಷ್ಟೊಂದು ವ್ಯತ್ಯಾಸ ಇಲ್ಲ. ಸಾದಾಸೀದವಾಗಿ ಇರುವುದರಿಂದ ಹೇಳುವಂತಹ ಸವಾಲುಗಳು ಇಲ್ಲ. ಒಂದು ಪಕ್ಷ ಇಳಿವಯಸ್ಸಿನ ಪಾತ್ರವಾಗಿದ್ದರೆ ಅದಕ್ಕೆ ತಕ್ಕಂತೆ ದೇಹ ಮತ್ತು ಭಾಷೆಯನ್ನು ಹೊಂದಿಸಬೇಕು. ಪಾತ್ರಕ್ಕೆ ಸಂಬಂಧಿಸಿದಂತೆ ಸ್ವಲ್ಪ ಅಧ್ಯಯನವೂ ಬೇಕಾಗುತ್ತದೆ.

★ *ಅಭಿನಯದ ಅಭಿರುಚಿ ಹುಟ್ಟಿದ್ದು ಹೇಗೆ?*

ಅದಕ್ಕೆ ನನ್ನ ತಾಯಿ ಲೇಖಾ ಭಟ್ ಕಾರಣ. ನಮ್ಮ ತಂದೆ ಸೀತಾರಾಮ ಭಟ್ ಮಣಿಪಾಲ್‌ನ ಎಂಜಿನಿಯರಿಂಗ್ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದರು. ನನ್ನ ತಾಯಿ ಅವರ ಕಾಲೇಜಿನಲ್ಲಿ ಅನೇಕ ನಾಟಕಗಳನ್ನು ಆಡಿದ್ದರು. ಅವರ ನಾಟಕಗಳನ್ನು ನೋಡುತ್ತಲೇ ನಾನೂ ಪ್ರಭಾವಿತಳಾಗಿದ್ದೇನೆ.

★ *ಪಾತ್ರಗಳು ಅಂದರೆ ಹೇಗಿರಬೇಕು ಎಂದು ಬಯಸುತ್ತೀರಿ?*

ಸತ್ವಯುತ ಮಹಿಳೆಯ ಗುಣವನ್ನು ಪ್ರತಿನಿಧಿಸುವ ಪಾತ್ರ. ಅಂದರೆ ಅದನ್ನು ಸ್ತ್ರೀವಾದಿ ಹಿನ್ನೆಲೆ ಅಂದರೂ ಅಡ್ಡಿಯಿಲ್ಲ. ಸಿನಿಮಾದಲ್ಲಿಯೂ ಅವಕಾಶ ಸಿಕ್ಕರೆ ನಟಿಸುತ್ತೇನೆ. ಎಲ್ಲೇ ಆದರೂ ನೆಗೆಟಿವ್ ಪಾತ್ರಕ್ಕಿಂತ ಪಾಸಿಟಿವ್ ಪಾತ್ರ ಮುಖ್ಯ. ನೆಗೆಟಿವ್ ಪಾತ್ರಗಳಲ್ಲಿ ಹಲವಾರು ಬಾರಿ ಕಾಣಿಸಿಕೊಂಡಿದ್ದೇನೆ.

★ *ನಿಮ್ಮ ಉದ್ಯೋಗದ ಜೊತೆ ನಟನೆಯನ್ನೂ ಹೇಗೆ ನಿಭಾಯಿಸುತ್ತೀರಿ?*

ನನಗೆ ಪೋಷಕರ ಬೆಂಬಲ ಇದ್ದೇ ಇದೆ. ಹಾಗಾಗಿ ಏನಾದರೂ ಮಾಡಬಲ್ಲೆ ಎನ್ನುವ ಉತ್ಸಾಹ ನನ್ನದು. ಎಲ್ಲಕ್ಕಿಂತ ಹೆಚ್ಚಾಗಿ ನನ್ನದು ಸ್ವಯಂ ಉದ್ಯೋಗ ಇವೆಂಟ್ ಮ್ಯಾನೇಜ್‌ಮೆಂಟ್. ಅದನ್ನು ನನ್ನ ಡೇಟ್‌ಗಳಿಗೆ ಕ್ಲ್ಯಾಷ್ ಆಗದಂತೆ ನೋಡಿಕೊಳ್ಳುತ್ತೇನೆ. ಹಾಗಾಗಿ ಎರಡನ್ನೂ ನಿರ್ವಹಿಸುವುದು ಕಷ್ಟ ಆಗುವುದಿಲ್ಲ.

■ ರಾಘವೇಂದ್ರ